| | |
|---|---|
| <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u> | |
| ಸಿ.ಸಿ.ನಂ.**34/2022** | |
| ಚಾಸಾ-**9** | |
| ಪ್ರಾಸಾ-**7** | |
| ಸಾಕ್ಷಿದಾರರ ಹೆಸರು | ಡಾಃ ವ್ಹಿ.ಸಿ. ಮುದಿಗೌಡರ |
| ತಂದೆಯ ಹೆಸರು | ಚನ್ನಪ್ಪ |
| ವಯಸ್ಸು | **54** ವರ್ಷ |
| ಉದ್ಯೋಗ | ಮಕ್ಕಳ ತಜ್ಞ ವೈದ್ಯಾಧಿಕಾರಿ, ಜಮಖಂಡಿ |
| ವಾಸಸ್ಥಳ | ಜಮಖಂಡಿ |

<u>ದಿನಾಂಕ **13.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ-</u>

ನಾನು 2016 ರಿಂದ ಇಲ್ಲಿಯರವರೆಗೆ ಜಮಖಂಡಿಯ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 18.07.2021 ರಂದು ಬೆಳಿಗ್ಗೆ 7.30 ಗಂಟೆಗೆ ಜಮಖಂಡಿ ಗ್ರಾಮೀಣ ಪೋಲಿಸ್ ಠಾಣೆಯ ಪೋಲಿಸ್ ಪೇದೆ ಸಂಖ್ಯೆಃ909 ಹೆಸರು ಗಣೇಶ ಮೋಕಾಶಿ ಇವರು ಸುರೇಖಾ (ಚಾಸಾ-1), ಶಕುಂತಲಾ ಗಂಡ ಬಸಪ್ಪ ತೇಲಿ (ಚಾಸಾ-3) ಮತ್ತು ಬಾಬುಸಾಬ ತಂದೆ ದಾವಲಸಾಬ ಮ್ಯಾಗೇರಿ (ಚಾಸಾ-4) ಇವರನ್ನು ಚಿಕಿತ್ಸೆಗಾಗಿ ಹಾಗೂ ಗಾಯದ ಕುರಿತು ಪ್ರಮಾಣ ಪತ್ರ ಪಡೆಯಲು ಕರೆದುಕೊಂಡು ಬಂದಿದ್ದರು.

2. ನಾನು ಸುರೇಖಾ ಇವರನ್ನು ಪರೀಕ್ಷಿಸಲಾಗಿ, ಅವರ ಎಡಮುಂಗೈ ಹಿಂಭಾಗದಲ್ಲಿ ಮತ್ತು ಮುಂಭಾಗದಲ್ಲಿ ತೆರಚಿದ ಗಾಯಗಳಾಗಿದ್ದವು. ಅದೇ ರೀತಿಯಾಗಿ ಸದರಿಯವರ ಬಲಮುಂಗೈ ಹಿಂಭಾಗದಲ್ಲಿ ಮತ್ತು ಮುಂಭಾಗದಲ್ಲಿ ತೆರಚಿದ ಗಾಯಗಳಾಗಿದ್ದವು. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಅವುಗಳ ಉದ್ದಳತೆಯನ್ನು ಗಾಯದ ಪ್ರಮಾಣ ಪತ್ರದಲ್ಲಿ ವಿವರವಾಗಿ ನಮೂದಿಸಿರುತ್ತೇನೆ. ಸದರಿ ಗಾಯಗಳು ಗಟ್ಟಿಯಾದ ಮತ್ತು ಮೊಂಡಾದ ವಸ್ತುವಿನಿಂದ ಹೊಡೆದರೆ ಈ ಮೇಲೆ ಹೇಳಿದ ಗಾಯಗಳು ಆಗಬಹುದು. ಯಾವುದೇ ವ್ಯಕ್ತಿ ಕೈಯಲ್ಲಿ ಗಾಜಿನ ಬಳೆ ಧರಿಸಿರುವಾಗ ಅವುಗಳು ಅನಿರೀಕ್ಷಿತವಾಗಿ ಒಡೆದು ಹೋದರೆ ಸದರಿ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

3. ನಂತರ ನಾನು ಶಕುಂತಲಾ ಇವರನ್ನು ಪರೀಕ್ಷಿಸಲಾಗಿ, ಅವರ ಬಲಮುಂಗೈಗೆ ತೆರಚಿದ ಗಾಯಗಳು ಆಗಿರುತ್ತವೆ. ಸದರಿಯವರು ಬಲಭುಜದಲ್ಲಿ ನೋವು ಇರುತ್ತದೆ ಎಂದು ತಿಳಿಸಿದ್ದರು, ಆದರೆ ಅಲ್ಲಿ ಯಾವುದೇ ಗಾಯಗಳು ಕಂಡು ಬಂದಿರುವುದಿಲ್ಲ. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಅವುಗಳ ಉದ್ದಳತೆಯನ್ನು ಗಾಯದ ಪ್ರಮಾಣ ಪತ್ರದಲ್ಲಿ ವಿವರವಾಗಿ ನಮೂದಿಸಿರುತ್ತೇನೆ. ಸದರಿ ಗಾಯಗಳು ಗಟ್ಟಿಯಾದ ಮತ್ತು ಮೊಂಡಾದ ವಸ್ತುವಿನಿಂದ

ಹೊಡೆದರೆ ಈ ಮೇಲೆ ಹೇಳಿದ ಗಾಯಗಳು ಆಗಬಹುದು. ಯಾವುದೇ ವ್ಯಕ್ತಿ ಕೈಯಲ್ಲಿ ಗಾಜಿನ ಬಳೆ ಧರಿಸಿರುವಾಗ ಅವುಗಳು ಅನಿರೀಕ್ಷಿತವಾಗಿ ಒಡೆದು ಹೋದರೆ ಸದರಿ ಸ್ವರೂಪದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

4. ನಂತರ ನಾನು ಬಾಬುಸಾಬ ಇವರನ್ನು ಪರೀಕ್ಷಿಸಲಾಗಿ, ಅವರ ಮೂಗಿನ ಊತ ಉಂಟಾಗಿತ್ತು. ಸದರಿಯವರು ತಮಗೆ ಸಂಪೂರ್ಣ ಮೈಕೈ ನೋವು ಆಗಿರುತ್ತದೆ ಎಂದು ಹೇಳಿರುತ್ತಾರೆ. ಆದರೆ ಆತರಹದ ಯಾವುದೇ ಗಾಯಗಳು ಕಂಡು ಬಂದಿರುವುದಿಲ್ಲ. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳಾಗಿದ್ದು, ಅವುಗಳ ಉದ್ದಳತೆಯನ್ನು ಗಾಯದ ಪ್ರಮಾಣ ಪತ್ರದಲ್ಲಿ ವಿವರವಾಗಿ ನಮೂದಿಸಿರುತ್ತೇನೆ. ಸದರಿ ಗಾಯಗಳು ಗಟ್ಟಿಯಾದ ಮತ್ತು ಮೊಂಡಾದ ವಸ್ತುವಿನಿಂದ ಹೊಡೆದರೆ ಈ ಮೇಲೆ ಹೇಳಿದ ಗಾಯಗಳು ಆಗಬಹುದು. ಒಬ್ಬ ವ್ಯಕ್ತಿ ತನ್ನ ಕೈಯನ್ನು ಮುಷ್ಟಿ ಮಾಡಿ ಮತ್ತೊಬ್ಬ ವ್ಯಕ್ತಿಯ ಮೂಗಿಗೆ ಹೊಡೆದರೆ ಈ ಮೇಲೆ ಹೇಳಿದ ಗಾಯಗಳು ಆಗಬಹುದು ಎಂದರೆ ಸರಿ.

5. ಈಗ ಸಾಕ್ಷಿಯು ಚಾಸಾ-1, 3 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳನ್ನು ಮತ್ತು ಅವುಗಳ ಮೇಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿರುವುದರಿಂದ, ಅವುಗಳನ್ನು ಕ್ರಮವಾಗಿ ನಿಪಿ-11 ರಿಂದ 13 ಮತ್ತು ಸಹಿಗಳನ್ನು ನಿಪಿ-11(ಎ), ನಿಪಿ-12(ಎ) ಮತ್ತು ನಿಪಿ-13(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎನ್ ಬಿ ಜಿ ವಕೀಲರಿಂದಃ-</u>

1. ಚಾಸಾ-1, 3 ಮತ್ತು 4 ರವರನ್ನು ಪೋಲಿಸ್ ಪೇದೆಯು ಅರ್ಜಿಯೊಂದಿಗೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಗಾಯದ ಪ್ರಮಾಣ ಪತ್ರಗಳಲ್ಲಿ ನಾನು ನೀಡಿರುವ ಚಿಕಿತ್ಸೆಯ ಕುರಿತು ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ ಹೆಣ್ಣು ಮಕ್ಕಳು ಮನೆ ಕೆಲಸ ಮಾಡುವಾಗ ಜಾರಿ ನೆಲದ ಮೇಲೆ ಬಿದ್ದಾಗ, ಅವರ ಕೈಯಲ್ಲಿದ್ದ ಬಳೆಗಳು ಒಡೆದು ನಿಪಿ-11 ಮತ್ತು 12 ರಲ್ಲಿ ಹೇಳಿರುವ ಪ್ರಕಾರದ ಗಾಯಗಳು ಆಗಬಹುದು ಎಂದರೆ ಸರಿ. ಚಾಸಾ-4 ರವರಿಗೆ ಆಗಿರುವ ಗಾಯವು, ಯಾವುದೇ ಒಬ್ಬ ವ್ಯಕ್ತಿ ಬಸ್ ನಲ್ಲಿ ಪ್ರಯಾಣ ಮಾಡುವಾಗ, ಮುಂದಿನ ಆಸನಕ್ಕೆ ಮುಖ ತಾಗಿದಾಗ ಸದರಿ ಪ್ರಕಾರದ ಗಾಯಗಳು ಆಗಬಹುದು ಎಂದರೆ ಸರಿ. ನಾನು ತನಿಖಾಧಿಕಾರಿಗೆ

ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರಗಳನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

RAJASHEKHAR Digitally signed by RAJASHEKHAR Date: 2026.01.14 19:05:11 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

| | |
|---|---|
| <u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u> | |
| ಸಿ.ಸಿ.ನಂ.**34/2022** | |
| | ಚಾಸಾ-**10** |
| | ಪ್ರಾಸಾ-**8** |
| ಸಾಕ್ಷಿದಾರರ ಹೆಸರು | ಬಿ.ಎಸ್. ಬಿರಾದಾರ |
| ತಂದೆಯ ಹೆಸರು | ಸಿದ್ದನಗೌಡ |
| ವಯಸ್ಸು | **61** ವರ್ಷ |
| ಉದ್ಯೋಗ | ನಿವೃತ್ತ ಪಿಎಸ್ಐ |
| ವಾಸಸ್ಥಳ | ಜಮಖಂಡಿ |

<u>ದಿನಾಂಕ **13.01.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ- ಸ.ಸ.ಅ ರವರಿಂದಃ-</u>

1. ನಾನು ಸೆಪ್ಟೆಂಬರ್-2017 ರಿಂದ ಜುಲೈ-2024 ರವರೆಗೆ ಜಮಖಂಡಿ ಗ್ರಾಮೀಣ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ಘಟನೆ ನಡೆದ ದಿನಾಂಕದಂದು ಸದರಿ ಪೋಲಿಸ್ ಠಾಣೆಯಲ್ಲಿ ನಾನು ಎಎಸ್ಐ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆ. ದಿನಾಂಕ 18.07.2021 ರಂದು ಪ್ರಸ್ತುತ ಪ್ರಕರಣದಲ್ಲಿಯ ಚಾಸಾ-1, 3 ಮತ್ತು 4 ರವರು ಗಾಯಗಳನ್ನು ಅನುಭವಿಸಿದ್ದು, ನಮ್ಮ ಠಾಣೆಯ ಸೋನಿ ಕ್ಯಾಮರಾದಿಂದ ಸದರಿಯವರ ಗಾಯಗಳ ಫೋಟೋಗಳನ್ನು ತೆಗೆದಿರುತ್ತೇನೆ. ನಮ್ಮ ಠಾಣೆಯಲ್ಲಿರುವ ಪ್ರಿಂಟರನಿಂದ ತೆಗೆದಿರುವ ಫೋಟೋಗಳನ್ನು ಪ್ರಿಂಟ್ ತೆಗೆದಿರುತ್ತೇನೆ. ಅದೇ ದಿನ ಸಂಜೆ ಸುಮಾರು 5.00 ರಿಂದ 6.00 ಗಂಟೆ ಮಧ್ಯದಲ್ಲಿ ಘಟನಾ ಸ್ಥಳದ ಫೋಟೋಗಳನ್ನು ತೆಗೆದಿರುತ್ತೇನೆ. ಅದೇ ದಿನ ನಮ್ಮ ಠಾಣೆಯಲ್ಲಿರುವ ಪ್ರಿಂಟರನಿಂದ ತೆಗೆದಿರುವ ಫೋಟೋಗಳನ್ನು ಪ್ರಿಂಟ್ ತೆಗೆದಿರುತ್ತೇನೆ. ನಂತರ ನಾನು ಪ್ರಿಂಟ್ ತೆಗೆದ ಎಲ್ಲಾ ಫೋಟೋಗಳನ್ನು ಸರ್ಟಿಫಿಕೇಟನೊಂದಿಗೆ ಚಾಸಾ-11 ರವರಿಗೆ ನೀಡಿರುತ್ತೇನೆ.

2. ಈಗ ಸಾಕ್ಷಿಯು ನ್ಯಾಯಾಲಯದ ಕಡತದಲ್ಲಿರುವ ಕಲಂ.65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮ ರ ಅಡಿಯಲ್ಲಿ ನೀಡಲಾದ ಪ್ರಮಾಣ ಪತ್ರವನ್ನು ನೋಡಿ, ಅದರ ಮೇಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-14 ಮತ್ತು ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಯು ನ್ಯಾಯಾಲಯದ ಕಡತದಲ್ಲಿರುವ ಮೂರು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-15 ರಿಂದ 17 ಎಂದು ಗುರುತಿಸಲಾಯಿತು. ಈಗ ಸಾಕ್ಷಿಯು ನಿಪಿ-2 ರಿಂದ 5, 9 ಮತ್ತು 10 ಫೋಟೋಗಳನ್ನು ನೋಡಿ, ಅವುಗಳನ್ನು ಸದರಿ ಕ್ಯಾಮರಾದಿಂದ ತಾನೇ ತೆಗೆದಿರುವುದಾಗಿ ಹೇಳುತ್ತಾರೆ.

<u>ಪಾಟೀ ಸವಾಲು: ಆರೋಪಿತರ ಪರ ಶ್ರೀ.ಎನ್ ಬಿ ಜಿ ವಕೀಲರಿಂದ:-</u>

1. ನಿಪಿ-14 ರಲ್ಲಿ ಸದರಿ ಫೋಟೋಗಳನ್ನು ಯಾವ ಸ್ಥಳಗಳಲ್ಲಿ ಮತ್ತು ಯಾವ ಸಮಯಕ್ಕೆ ತೆಗೆದಿರುತ್ತೇನೆ ಎಂದು ವಿವರವಾಗಿ ನಮೂದಿಸಿಲ್ಲ ಎಂದರೆ ಸರಿ. ನಾನು ಕ್ಯಾಮರಾ ಉಪಯೋಗಿಸುವ ಮತ್ತು ಫೋಟೋಗಳನ್ನು ತೆಗೆಯುವ ತರಬೇತಿಯನ್ನು ಪಡೆದಿಲ್ಲ. ಸಾಕ್ಷಿಯು ಮುಂದುವರೆದು ನಾನು ದಿನನಿತ್ಯ ಫೋಟೋಗಳನ್ನು ತೆಗೆಯುವ ಅಭ್ಯಾಸ ಹೊಂದಿದ್ದು, ಆ ಒಂದು ಪರಿಣಿತಿಯ ಆಧಾರದ ಮೇಲೆ ಸದರಿ ಫೋಟೋಗಳನ್ನು ತೆಗೆದಿರುವುದಾಗಿ ಸ್ವತಃ ನುಡಿಯುತ್ತಾರೆ. ನಾನು ತನಿಖಾಧಿಕಾರಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಾನು ಫೋಟೋಗಳನ್ನು ತೆಗೆಯದೇ ಇದ್ದರೂ, ಸುಳ್ಳು ಪ್ರಮಾಣ ಪತ್ರ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

RAJASHEKHAR Digitally signed by RAJASHEKHAR Date: 2026.01.14 19:05:30 +0530

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.